CW.1      PW.1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.687/2021

| | |
|---|---|
| ಸಾಕ್ಷಿದಾರರ ಹೆಸರು | ಸನತ್ ಕುಮಾರ್ |
| ತಂದೆಯ ಹೆಸರು | ಲೇಟ್ ನಂಜಯ್ಯ |
| ವಯಸ್ಸು | 50 ವರ್ಷ |
| ವೃತ್ತಿ | ಚಾಲಕ |
| ವಿಳಾಸ | ಅಂಬೇಡ್ಕರ್ ನಗರ, ಕನಕಪುರ ಟೌನ್ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 25.11.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿ ಗೊತ್ತಿರುವುದಿಲ್ಲ. ಚಾಸಾ-2 ರಿಂದ 13 ರವರು ಗೊತ್ತಿರುವುದಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಸುಮಾರು 3-4 ವರ್ಷಗಳ ಹಿಂದೆ ಪೋಲೀಸ್ ಠಾಣೆಗೆ ಬೇರೆ ಯಾವುದೋ ಕೆಲಸದ ಮೇರೆಗೆ ಹೋದಾಗ ಅಲ್ಲಿ 2-3 ಖಾಲಿ ಬಿಳಿಯ ಹಾಳೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನನಗೆ ಯಾವುದಕ್ಕೆ ಮತ್ತು ಯಾವ ಕಾರಣಕ್ಕೆ ಸಹಿ ಪಡೆದಿರುತ್ತಾರೆ ಎಂದು ಗೊತ್ತಿಲ್ಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಕೇವಲ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ದೂರು ಆಗಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನನ್ನನ್ನು ಪೋಲೀಸರು ಯಾವುದೇ ಪಂಚನಾಮೆಗೆ ಕರೆದಿರಲಿಲ್ಲ ಹಾಗೂ ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

ಸಾಕ್ಷಿಗೆ ಸದರಿ ಪ್ರಕರಣದ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಕೇವಲ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ವಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ವಾಟೀ ಸವಾಲುಃ ಸ. ಸ. ಅ. ರವರಿಂದ**

ನಾನು ದಿನಾಂಕ 05.03.2019 ರಂದು ನಾನು ದಿಃ04.03.2019 ರಂದು ಈಗ ಸವಿಸ್ತಾರವಾಗಿ ಓದಿ ಹೇಳಿದಂತೆ ಆದ ಅಪಘಾತದ ವಿಚಾರವಾಗಿ ಪೋಲೀಸರಿಗೆ ಆರೋಪಿಯ ವಿರುದ್ದ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಅದೇ ರೀತಿ ದಿನಾಂಕ 05.03.2019 ರಂದು ಪೈಪ್ ಲೈನ್ ಕನಕಪುರ-ಸಾತನೂರು ರಸ್ತೆಯ ಜಂಕ್ಷನ್ ಬಳಿ ನಾನು ತೋರಿಸಿದ ಸ್ಥಳದಲ್ಲಿ ಚಾಸಾ-3 ಮತ್ತು 4 ರವರ ಸಮಕ್ಷಮ ಸಂಜೆ 4 ಗಂಟೆಯಿಂದ 5 ಗಂಟೆಯವರೆಗೂ ಈಗ ವಿವರವಾಗಿ ಓದಿ ಹೇಳಿದಂತೆ ಸ್ಥಳ ಮಹಜರ್ ಮಾಡಿ ಸ್ಥಳದಲ್ಲಿ ಅಪಘಾತಪಡಿಸಿದ ಹಾಗೂ ಅಪಘಾತಕ್ಕೆ ಒಳಗಾದ ವಾಹನಗಳನ್ನು ಅಮಾನತು ಪಡಿಸಿಕೊಂಡು ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿ ರಾಜಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

CW.1 PW.1

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಏನೂ ಇರುವುದಿಲ್ಲ

ಮರುವಿಚಾರಣೆಃ ಇರುವುದಿಲ್ಲ

ಓ ಹೇ ಕೇ ಸರಿ ಇದೆ

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,

ಕನಕಪುರ .